ತಾರೀಖು 14ನೇ ಮಾರ್ಚಿ 1889.

ತಿಪಟೂರು, ಪಾವಗಡ ಈ ಸಬ್ ರಜಿಸ್ಟ್ರಾರಗಳ ಆಫೀಸಿನಲ್ಲಿ ಈ ಕೆಳಗೆ ನಮೂದಿಸಿರುವ ದಸ್ತಾವೇಜಿಗೆ ಸಂಬಂಧಪಟ್ಟವರೆ ಆಗಲಿ ಅಥವಾ ಕ್ರಮವಾಗಿ ಅಧಿಕಾರ ಪಡೆದ ಮುತಾಲೀಕರೆ ಆಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ಒಳಗಾಗಿ ವಾಪಸು ಪಡಿಯಲು ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ ಇಂಡ್ಯನ್ ರಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಮೇರೆ ನಾಶಪಡಿಸಲ್ಪಡುವದು.

ನಂಬರ್.	ದಸ್ತಾವೇಜನ್ನು ಬರೆದುಕೊಟ್ಟವರ ಹೆಸರು	ದಸ್ತಾವೇಜನ್ನು ಬರೆಸಿಕೊಂಡವರ ಹೆಸರು.	ದಸ್ತಾವೇಜಿನ ತಾರೀಖು.	ರಜಿಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
258 ——— 1886—87	ತಿಪಟೂರು ತಾಲ್ಲೂಕು ಈಚನೂರು ವಾಸಸ್ಥ ವ್ಯಾಗ್ರಾಣದ ಗುರವಂಣ್ಣಲ್ಲಿರುವ ವಾಣಿ ಮಲ್ಲುಂಕಟ್ಟುವಗ ಹಾಲಪ್ಪಟ್ಟ ಪಡಕಟ್ಟೆ	ಗುಬ್ಬಿ ತಾಲ್ಲೂಕು ಕ ಸಣ ಗುಬ್ಬಿ ಗ್ರಾಮದ	15 1 87	31 1 87	ಈಚನೂರು ಗ್ರಾಮದಸರ್ವೆ 163ನೇ ನಂಬರ ಎಕರೆ 1–37 ಆಕಾರ 6–8–0 ಸರ್ವೆ249ನೇ ನಂ. ಫೋಡು 2ರ ಜಾಬತು ಎಕರೆ 2–18 ಆಕಾರ 2–4 ಮತ್ತು ಇದೆ ನಂ. ಪೈಕಿ ಎಕರೆ 2—2 ಆಕಾರ 2–4 ಸರ್ವೆ 78ನೇ ನಂಬರ್ ಪೈಕಿ ಸರ್ವೇ 158ನೇ ನಂ. ಪೈಕಿ ಗದ್ದೆ ಎಕರೆ 32 ಆಕಾರ 3–12 ಮತ್ತು ಈಚನೂರು ಗ್ರಾಮದಲ್ಲಿ ತಾನು ವಾಸಮಾಡುವ ಮನೆ ಖಾನೇಷುಮಾರಿ ನಂಬರ್ 103—108 ಮಾಳಿಗೆ ಮನೆ ಮತ್ತು 122ನೇ ನಂ ನಿವೇಶನ ಸಹ 400 ರೂಪಾಯಿಗೆ ಆಧಾರ ಮಾಡಿರುವದಾಗಿ
30 ——— 1886—87	ಪಾವಗಡದ ತಾಲ್ಲೂಕು ರಾಚೆಲ್ಲು ಪೋಬಿ ಬಳ್ಳಗಮುದ್ರದಲ್ಲಿರುವ ಸ್ಮಾರ್ತಬ್ರಾಹ್ಮಣ ಶಾನುಭಾಗ ಅಪ್ಪಯ್ಯನ ಮಕ್ಕಳಾದ ವೆಂಕಟರಮಣಪ್ಪ, ಕೊಂಡಪ್ಪ, ನಾರಣಪ್ಪ, ನಂಜಪ್ಪ	ಪಾವಗಡದ ತಾಲ್ಲೂ ಕು ರಾಚಲ್ಲು ಪೋಬಿ ವೈ ತಿರುಮಣಿ ವಾಸಸ್ಥ ವೈಷ್ಣವರ ದೇವತ ಲೆಚ್ಚ ಯ್ಯನ ಮಗ ಚಲಮ ಯ್ಯ	6 12 86	6 12 86	ರ್ಯಾಪಟೆ ಮಜರೆ ನಾಗೇನಹಳ್ಳಿ ಬಯಿಣ ಸರ್ವೆ 222ನೇ ನಂ. ನಾರಣಪ್ಪನ ಖಾತೆ ದಾಖಲೆ ಬಾಗಾಯತು 3–30 ಎಕರೆ ಆಕಾರ 9–8 ಸಾಬಕುಬರದುಕೊಟ್ಟವರ ಅನುಭವದಲ್ಲಿದ್ದು ಹಾಲಿ ಬರಸಿಕೊಡವರ ಪಟ್ಟೆ ದಾಖಲೆ ಬಳ್ಳಸಮುದ್ರ ಗ್ರಾಮದ ಬಯಿಣ ಸರ್ವೆ 121ನೇ ಪೈಕಿ ಫೋಡು 1ನೇ ಎಕರೆ 2–24 ಆಕಾರ 7–8 ಪೈಕಿ ಈ ಯುರಪು ಜಮೀನನ್ನೂ 180 ರೂಪಾಯಿಗೆ ಕ್ರಯವಮಾಡಿರುವದಾಗಿ

ಪಿ. ಯ್ಯ. ಕೃಷ್ಣಮೂರ್ತಿ,
ರಜಿಸ್ಟ್ರಾರ.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 25ನೇ ಫಿಬ್ರವರಿ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಾಗುವ ತಾಲ್ಲೂಕುಗಳಲ್ಲಿ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕು 1889ನೇ ಇಸವಿ ಮಾರ್ಚಿ ತಾರೀಖು 30ರಲ್ಲು ಆಯಾಯ ತಾಲ್ಲೂಕು ಕಛೇರಿಯಲ್ಲಿ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತ. ಹರಾಜು ದಿವಿ 11 ಘಂಟೆಗೆ ಆರಂಭಿಸಲ್ಪಡುವದು.

ಬವರಿಂಗ್‌ವೇಟೆ, ಕಿಲ್ಲ ಫಟ್ಟು, ಗೋರಬಿದನೂರು.

2. ಆಮಲೆದಾರ್ರು ಅಥವಾ ಸರಸ್ತೇದಾರ್ರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು, ಮೈಸೂರು ದಿವಾನಸಾಹೆಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

4. ಇಜಾರೆ 1890ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ಜಾರೀಲಿರುವದು.

5. ಹರಾಜು ಕಾಲದಲ್ಲಿ ಸವಾಲ್‌ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್‌ಮಾಡುತ್ತಾರೋ ಅಥವಾ ಯೇಜಂಟ್ರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸತ್ತೇಕು, ಯೇಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್‌ಮಾಡುತ್ತಾರೋ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆ ಹಾಜರ್ಮಾಡತೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

6. ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಮೊಬಲಗು ಪೈಕಿ ಕೀಕಾಣ 25 ರೂಪಾಯಿಗಳ ಮೇರೆ ಡಿಪಾಜಿಟ್ ಹಾಜರ್ಮಾಡತೇಕು. ಹರಾಜ್ ಮಂಜೂರಾದ ಸಂಗತಿ ಆಮಲ್‌ದಾರ್ರಿಂದ ತಿಳಿಸಲ್ಪಟ್ಟ ಲಾಗಾಯತು 7 ದಿವಸಗಳ ವಳಗಾಗಿ ಬಾಕಿ ಮೊಬಲಗನ್ನು ಮತ್ತು ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆ ಮೇರೆಗೆ ಲೋಕಲ್‌ಸೆಸ್ ಸಹ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು ಡಿಪಾಜಿಟ್ ಹಾಜರ್ಮಾಡದೇ ಇದ್ದಾಗ್ಯೂ